ಶ್ರೀ ಹೆಚ್.ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಮೂಲಕ 29ವರ್ಷ ಆಗಿರ ತಕ್ಕವರನ್ನು ಮೆರಿಟ್‌ಮೇಲೆ ಆಯ್ಕೆ ಮಾಡಿದ್ದೇವೆ. ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸಮಾಡುತ್ತಿದ್ದವರನ್ನು ಹಂಗಾಮಿಯಾಗಿ ಮುಂದುವರಿಸಿಕೊಂಮ ಬಂದಿದ್ದೇವೆ. ಹುದ್ದೆಗಳು ಖಾಲಿಯಿರತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳನ್ನು ಭರ್ತಿ ಮಾಡುವ ಬಗ್ಗೆ ಆದಷ್ಟು ಜಾಗ್ರತೆ ಸೂಕ್ತಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಯು· ಭೂಪತಿ.—ನನ್ನ ಪ್ರಶ್ನೆಯನ್ನು ಮಾನ್ಯಮಂತ್ರಿಗಳು ಅರ್ಥಮಾಡಿಕೊಳ್ಳಲಿಲ್ಲ. ನಾನು ಕೇಳಿದ್ದು ಇಷ್ಟೆ. ಎಷ್ಟು ಖಾಲಿ ಇತ್ತು ಎಷ್ಟು ಹುದ್ದೆಗಳನ್ನು ಭರ್ತಿಮಾಡಿದ್ದೀರಿ, ಅದಕ್ಕೆ ಸರಿಯಾಗಿ ಉತ್ತರ ಕೊಡಬೇಕು.

ಶ್ರೀ ಹೆಚ್.ಜಿ. ಗೋವಿಂದೆಗೌಡ.—ಎಷ್ಟು ಹುದ್ದೆಗಳನ್ನು ಖಾಲಿ ಇತ್ತು ಭರ್ತಿಮಾಡಿದ್ದೇವೆ ಎನ್ನುವ ಮಾಹಿತಿ ನನ್ನ ಹತ್ತಿರ ಈಗ ಇಲ್ಲ.

ಶ್ರೀ ಯು. ಭೂಪತಿ.—ತಾವೇ ತಮ್ಮ ಉತ್ತರದಲ್ಲಿ ಹೇಳಿದ್ದೀರಿ, ಬೀದರ್ ಜಿಲ್ಲೆಯನ್ನು ಹೊರತುಪಡಿಸಿ ಎಲ್ಲಾ ಜಿಲ್ಲೆಗಳಲ್ಲಿಯೂ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಿದ್ದೇವೆಂದು ಹೇಳಿದ್ದೀರಿ. ಮಾಹಿತಿ ಇಲ್ಲದೆ ಹೇಗೆ ಹೇಳಿದ್ದೀರಿ ?

ಶ್ರೀ ಹೆಚ್.ಜಿ. ಗೋವಿಂದೆಗೌಡ.—ಸುಮಾರು 19 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಸಾಧ್ಯವಾದಷ್ಟೂ ಬೇಗ ಭರ್ತಿಮಾಡುತ್ತೇವೆ.

ಶ್ರೀ ಯು. ಭೂಪತಿ.—ಸ್ಥಳೀಯ ಅಭ್ಯರ್ಥಿಗಳನ್ನು ಅಂದರೆ ಈ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಿರುವುದರಿಂದ ಈ ಪರಿಸ್ಥಿತಿ ಉದ್ಭವ ಆಗಿಲ್ಲವೇ? ಈ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚು ಆಗಿಲ್ಲವೆ ? ಇದಕ್ಕೆ ತಮ್ಮ ಅಭಿಪ್ರಾಯವೇನು ?

ಶ್ರೀ ಹೆಚ್.ಜಿ. ಗೋವಿಂದೆಗೌಡ.—ಈಗ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಉಳಿದಿರತಕ್ಕವರನ್ನು ಸಧ್ಯದಲ್ಲಿ ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಈಗ ಇರುವ ಖಾಲಿಸ್ಥಳಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ವ್ಯವಸ್ಥೆ ಮಾಡಲಾಗಿದೆ.

ವಿಷಯ.—ರಾಜ್ಯದ ಕೇಂದ್ರ ಗ್ರಂಥಾಲಯ ಖರೀದಿಸಿರುವ ಪುಸ್ತಕಗಳು

ಪ್ರ. ಸಂಖ್ಯೆ 54 (264) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರಾಜ್ಯ ಕೇಂದ್ರ ಗ್ರಂಥಾಲಯ ಕನ್ನಡದಲ್ಲಿ ಪ್ರಕಟವಾದ ಹೊಸ ಗ್ರಂಥಗಳನ್ನು ಖರೀದಿ ಮಾಡುವ ಯೋಜನೆಯಲ್ಲಿ ಕೊಳ್ಳಲಾದ ಗ್ರಂಥಗಳೆಷ್ಟು ಹಾಗೂ ನೀಡಲಾದ ಹಣವೆಷ್ಟು ?

(1982-83, 1983-84 ಮತ್ತು 1984-85ನೇ ವರ್ಷಗಳ ವಿವರಗಳನ್ನು ಒದಗಿಸುವುದು)

ಆ) ಪ್ರಕಾಶಕರಿಂದ, ಲೇಖಕರಿಂದ ಈ ಬಗ್ಗೆ ಮನವಿಯಾಗಲಿ, ದೂರುಗಳಾಗಲಿ ಬಂದಿವೆಯೆ? ಹಾಗಿದ್ದಲ್ಲಿ ಅವುಗಳ ನಿವಾರಣೆ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) 4010 ಶೀರ್ಷಿಕೆಗಳನ್ನು ಬಹುಪ್ರತಿಗಳಲ್ಲಿ ಕೊಳ್ಳಲಾಗಿದೆ. ಗ್ರಂಥಾಲಯ ಕರದಿಂದ ಕ್ರೋಢಿಕರಿಸಿದ ಹಣ ರೂ. 65,69.737-00 ವೆಚ್ಚ ಮಾಡಲಾಗಿದೆ.

1982-83, 1983-84 ಮತ್ತು 1984-85ನೇ ಸಾಲಿನಲ್ಲಿ ಯಾವುದೇ ಶೀರ್ಷಿಕೆಗಳನ್ನು ಖರೀದಿಸಿಲ್ಲ ಹಾಗೂ ಹಣ ವೆಚ್ಚ ಮಾಡಿರುವುದಿಲ್ಲ. ಇದರಿಂದ ವಿವರ ಕೊಡುವುದು ಉದ್ಭವಿಸುವುದಿಲ್ಲ.

ಆ) ಬಂದಿವೆ.

ಇಲಾಖೆಯು ಈ ಯೋಜನೆಯನ್ನು ಮುಂದುವರಿಸುವ ಬಗ್ಗೆ ''ವಿಶೇಷ ಧನ ಸಹಾಯ'' ನೀಡ ಬೇಕೆಂದು ಸರ್ಕಾರವನ್ನು ಕೇಳಿದ್ದು ಬೇಡಿಕೆಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೆ, ಸರ್ಕಾರ ಕೈಗೊಂಡ ಯೋಜನೆಯನ್ನು 1982-83, 1983-84 ಮತ್ತು 1984-85ರಲ್ಲಿ ಈ ಮೂರು ವರ್ಷ ನಿಲ್ಲಿಸಲಿಕ್ಕೆ ಕಾರಣ ವೇನು ? ಪ್ರಕಾಶಕರಿಗೆ ಮತ್ತು ಪುಸ್ತಕ ಬರೆಯತಕ್ಕವರಿಗೆ ತಿಳಿಸಿದ್ದೀರಾ ? ಯೋಜನೆಯನ್ನು ನಿಲ್ಲಿಸುವಾಗ ನೋಟೀಸ್ ಕೊಟ್ಟು ನಿಲ್ಲಿಸಿದ್ದೀರಾ ಅಥವಾ ತಾವು ಏಕೆ ನಿಲ್ಲಿಸಿದ್ದೀರಿ ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು).—ನಿಲ್ಲಿಸಲಿಕ್ಕೆ ಮೂಲ ಹಣದ ಕೊರತೆ. ಆಕ್ಷಾಯಿ ಮತ್ತು ಲ್ಯಾಂಡ್ ರೆವೆನ್ಯೂ ಈ ಎರಡೂ ಬಾಬುಗಳಿಂದ ಹಣ ಬರದಿರುವುದರಿಂದ ಮತ್ತು ನಮ್ಮ ಹತ್ತಿರ ಇರುವ ಹಣ ಕಡಿಮೆಯಿರುವುದರಿಂದ ಈ ಕಾರ್ಯಕ್ರಮವನ್ನು ರದ್ದು ಮಾಡಿದ್ದೇವೆಂದು ಹೇಳಿದ್ದೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ವಿಷಯ.—ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರುಗಳಿಗೆ ಗೌರವಧನ ಕೊಡುವ ಬಗ್ಗೆ

ಪ್ರ. ಸಂಖ್ಯೆ 36 (3) ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಪ್ರಶಸ್ತಿ ಶಿಕ್ಷಕರುಗಳಿಗೆ ಅವರ ನಿವೃತ್ತಿ ವೇತನದ ಜೊತೆಗೆ ಗೌರವಧನ ಕೊಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹಿಂದಿನ ವಿದ್ಯಾ ಸಚಿವರು ದಿನಾಂಕ 28-3-84ರಂದು ವಿಧಾನ ಮಂಡಲದಲ್ಲಿ ಹೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದರೆ ಈ ಮೇಲ್ಕಂಡ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀ ಹೆಚ್. ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು

ಆ) ಸೂಕ್ತ ಆದೇಶವನ್ನು ಹೊರಡಿಸಲಾಗಿದೆ.

---

*ಮಾನ್ಯ ಸದಸ್ಯರು ಹಜಾರಿರಲಿಲ್ಲ.

ವಿಷಯ ; ಇಳಕಲ್ ಗ್ರಾಮದಲ್ಲಿ ಬಾಡಿಗೆ ಕಟ್ಟಡದಲ್ಲಿ ಶಾಲೆಗಳನ್ನು ನಡೆಸುತ್ತಿರುವುದು.

ಪ್ರ. ಸಂಖ್ಯೆ 46 (162) ಶ್ರೀ ಎಸ್. ಎಸ್. ಕಡಪಟ್ಟಿ (ಹುನಗುಂದ).—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಹುನಗುಂದ ತಾಲ್ಲೂಕಿನ ಇಳಕಲ್ಲು ಗ್ರಾಮದಲ್ಲಿ ಪ್ರಾಥಮಿಕ ಶಾಲೆಗಾಗಿ ಅಲ್ಲಿನ ಜನತೆ ತಮ್ಮ ಕಟ್ಟಡಗಳನ್ನು ಬಾಡಿಗೆಗೆ ಕೊಟ್ಟಿರುವುದು ನಿಜವೇ ;

ಆ) ಕಟ್ಟಡಗಳ ಬಾಡಿಗೆಯನ್ನು ಪಾವತಿ ಮಾಡುವಲ್ಲಿ ಅತಿ ವಿಳಂಬವಾಗುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೇ ;

ಇ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ೃಕೆಗೊಂಡಿರುವ ಕ್ರಮಗಳೇನು ;

ಈ) ಈ ರೀತಿ ತೊಂದರೆಯಾಗುತ್ತಿರುವುದರಿಂದ ಸದರಿ ಕಟ್ಟಡಗಳ ಮಾಲೀಕರುಗಳು ಸದರಿ ಕಟ್ಟಡಗಳಲ್ಲಿರುವ ಶಾಲೆಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಮನವಿ ಸಲ್ಲಿಸಿರುವುದು ನಿಜವೇ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಕಟ್ಟಡದ ಬಾಡಿಗೆ ದರ ಅತಿ ಕಮ್ಮಿ ಇದೆ ಎಂಬ ಕಾರಣದಿಂದ ಮಾಲೀಕರುಗಳು ಕಟ್ಟಡಗಳನ್ನು ಖಾಲಿಮಾಡಿ ಎಂದು ಹೇಳುತ್ತಿರುವುದಾಗಿ ತಿಳಿದು ಬಂದಿದೆ.

ಸಂಖ್ಯೆ ಇಡಿ. 11 ಡಿಆರ್‌ಸಿ. 85

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ವಿಷಯ : ಧಾನ್ಯದ ಬೆಲೆ ನಿಗದಿ ಸಮಿತಿ ವರದಿ.

ಪ್ರ. ಸಂಖ್ಯೆ 52 (204) ಶ್ರೀ ಸಿ. ಎಂ. ರೇವಣಸಿದ್ಧಯ್ಯ (ಸಿರಗುಪ್ಪ).—ಮಾನ್ಯ ಕೃಷಿರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ರೈತರು ಬೆಳೆದ ಧಾನ್ಯದ ಬೆಲೆ ನಿಗದಿಪಡಿಸಲು ನೇಮಿಸಿದ್ದ ಸಮಿತಿಯ ವರದಿಯನ್ನು ಸರ್ಕಾರವು ಒಪ್ಪಿದೆಯೇ ;